ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 183-190
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹರ್ಡೇಕರ ಮಂಜಪ್ಪನವರ ರಾಷ್ಟ್ರೀಯ ಸಾಹಿತ್ಯ

**ಪ್ರವೀಣ ಗುರವ**
ಸಂಶೋಧನಾ ವಿದ್ಯಾರ್ಥಿ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***
*ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರೀಯ ಸಾಹಿತ್ಯವನ್ನು ದೊಡ್ಡ ಪ್ರಮಾಣದಲ್ಲಿ ರಚಿಸಿ ಪ್ರಸಾರ ಮಾಡಿದ ಕೀರ್ತಿ ಹರ್ಡೇಕರ ಮಂಜಪ್ಪ ಅವರಿಗೆ ಸಲ್ಲುತ್ತದೆ. ಅವರದು ಹಲವು ಮುಖಗಳಲ್ಲಿ ಹರಿಯುವ ಅದಮ್ಯ ಚೇತನ. ರಾಷ್ಟ್ರಸೇವೆ, ಸಮಾಜ, ಶಿಕ್ಷಣ, ಸಾಹಿತ್ಯ, ಪ್ರತಿಕೋದ್ಯಮ ಮೊದಲಾದ ಕ್ಷೇತ್ರಗಳಲ್ಲಿ ಪ್ರಾಮಾಣಿಕತೆಯಿಂದ ದುಡಿಯುವ ಮೂಲಕ ಈ ಕ್ಷೇತ್ರಗಳಿಗೆ ಏಕಕಾಲಕ್ಕೆ ಘನತೆ ಮತ್ತು ಪಾವಿತ್ರ್ಯಗಳನ್ನು ತಂದು ಕೊಟ್ಟರು. ತಮ್ಮ ನೈತಿಕ ಬ್ರಹ್ಮಚರ್ಯದ ತೇಜಸ್ಸು, ಅಪಾರವಾದ ಜ್ಞಾನಾನುಭವಗಳನ್ನು ಲೋಕರಹಿತ, ಜನಹಿತ ಕಾರ್ಯಗಳಿಗಾಗಿ ಸರ್ವಸಮರ್ಪಣ ಭಾವದಿಂದ ಧಾರೆಯೆರೆದರು. ಜನಹಿತ ವಿಚಾರ-ಆಚಾರಗಳ ಪ್ರಚಾರಕ್ಕಾಗಿ ಮಂಜಪ್ಪ ಅವರ ಬರವಣಿಗೆಯನ್ನು ಕೈಗೆತ್ತಿಕೊಂಡರು. ರಾಷ್ಟ್ರೀಯ ಸಾಹಿತ್ಯ ನಿರ್ಮಾಣಕಾರರಾಗಿ, ಪ್ರಸಾರಕರಾಗಿ ಮಂಜಪ್ಪ ಅವರು ಮಾಡಿದ ಪ್ರಯತ್ನ ಅನನ್ಯವಾದುದು, ಅಸಾಧಾರಣವಾದುದು.*

***Keywords:*** *ಹರ್ಡೇಕರ ಮಂಜಪ್ಪ, ರಾಷ್ಟ್ರೀಯ ಸಾಹಿತ್ಯ, ಧನುರ್ಧಾರಿ, ಶರಣ ಸಂದೇಶ.*

**ಪೀಠಿಕೆ**

ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರೀಯ ಸಾಹಿತ್ಯವನ್ನು ದೊಡ್ಡ ಪ್ರಮಾಣದಲ್ಲಿ ರಚಿಸಿ ಪ್ರಸಾರ ಮಾಡಿದ ಕೀರ್ತಿ ಹರ್ಡೇಕರ ಮಂಜಪ್ಪ ಅವರಿಗೆ ಸಲ್ಲುತ್ತದೆ. ಮಂಜಪ್ಪ ಅವರು 1906 ರಿಂದ ಧನುರ್ಧಾರಿ ಎಂಬ ಪತ್ರಿಕೆಯ ಪ್ರಕಟನೆಯ ಮೂಲಕ ಲೇಖಕ ಮತ್ತು ಪ್ರಕಾಶಕರಾದರು. ಇದಕ್ಕಿಂತಲೂ ಪೂರ್ವದಲ್ಲಿ ಕನ್ನಡ 1ನೇ ಪುಸ್ತಕಕ್ಕೆ ಶಬ್ದಾರ್ಥ ಬರೆದು ಕುಮಟೆಯಿಂದ ಪ್ರಕಾಶನಗೊಳಿಸಿದ್ದರು. ಇದರಿಂದ ಮಂಜಪ್ಪ ಅವರು ಮೊದಲು ಗ್ರಂಥ ಪ್ರಕಾಶಕರು, ಆ ನಂತರ ಪತ್ರಿಕೆಯ ಪ್ರಕಾಶಕರಾದ ಸಂಗತಿ ವ್ಯಕ್ತವಾಗುತ್ತದೆ. ಅಚ್ಚುಕಟ್ಟಾಗಿ ಬರೆಯುವುದು, ಬರೆದುದನ್ನು ಆದಷ್ಟು ಬೇಗ ಪ್ರಕಟಿಸುವುದು ಮಂಜಪ್ಪ ಅವರ ಮನೋಧರ್ಮವಾಗಿದ್ದಿತು. ಈ ಗ್ರಂಥ ಪ್ರಕಾಶನ ಹವ್ಯಾಸವನ್ನು ಇವರು ಬಹಳ ಹಚ್ಚಿಕೊಂಡಿದ್ದರು. ಧನುರ್ಧಾರಿ, ಉದ್ಯೋಗ, ಶರಣ ಸಂದೇಶ ಮೊದಲಾದ ಪತ್ರಿಕೆಗಳನ್ನು ಪ್ರಕಾಶನಗೊಳಿಸಿ, ನಾಡಿನ ಜನರಿಗೆ ತಲುಪಿಸಿದ ಶ್ರೇಯಸ್ಸು ಇವರದಾಗಿದೆ.

ಪತಿತೋದ್ಧಾರ ಪುಸ್ತಕವನ್ನು, ನಿಜಗುಣ ಶಿವಯೋಗಿಗಳ ಮತ್ತು ಸರ್ಪಭೂಷಣ ಶಿವಯೋಗಿಗಳ ಆಯ್ದ ಹಾಡುಗಳನ್ನು, ಬಸವೇಶ್ವರ ವಚನಗಳಲ್ಲಿಯ ನಾಲ್ಕಾರು ವಚನಗಳನ್ನು ಮಂಜಪ್ಪ ಅವರು ಪ್ರಕಟಿಸಿದ್ದು, ಇದು ಅವರ ಆರಂಭದ ಪ್ರಕಾಶನ ಚಟುವಟಿಕೆಯಾಗಿದೆ.

ಪತ್ರಿಕೆಯ ಪ್ರಕಾಶನ ಸ್ಥಗಿತಗೊಂಡ ಮೇಲೆ ವರ್ಷಕ್ಕೆ ಒಂದು ಗ್ರಂಥ ಪ್ರಕಟಿಸುವ ಯೋಜನೆ

***Please cite this article as:*** ಪ್ರವೀಣ ಗುರವ. (2023). ಹರ್ಡೇಕರ ಮಂಜಪ್ಪನವರ ರಾಷ್ಟ್ರೀಯ ಸಾಹಿತ್ಯ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 2(4), 183–190.

ಹಮ್ಮಿಕೊಂಡರು. ಗ್ರಂಥ ಪ್ರಕಾಶನವಿರಲಿ, ಪತ್ರಿಕಾ ಪ್ರಕಾಶನವಿರಲಿ ಮಂಜಪ್ಪ ಅವರು ಹೆಚ್ಚಾಗಿ ಸ್ವಂತ ಬಂಡವಾಳ ಹಾಕಿಯೇ ಪ್ರಕಾಶನ ಕಾರ್ಯ ಪೂರೈಸಿದ್ದಾರೆ. ಕೆಲವು ಸಲ ಮಾತ್ರ ಕೆಲವು ಉದಾರಿಗಳ ನೆರವು ಪಡೆದಿದ್ದಾರೆ.

1915ರಲ್ಲಿ 'ಸ್ವಕರ್ತವ್ಯ ಸಿದ್ಧಾಂತ' ಗ್ರಂಥದ 1000ಪ್ರತಿಗಳ ಪ್ರಕಟನೆಗೆ 100 ರೂಪಾಯಿ ವೆಚ್ಚ ಮಾಡಿದರು. ಮುಂದೆ ಮಹಾಯುದ್ಧದಿಂದ ಕಾಗದದ ಬೆಲೆ ವಿಪರೀತ ಏರಿತು. ಹೀಗಾಗಿ 1918ರಿಂದ ದೊಡ್ಡ ಗ್ರಂಥಗಳಿಗೆ ಬದಲಾಗಿ ಚಿಕ್ಕ ಗ್ರಂಥಗಳನ್ನು ಬರೆದು ಪ್ರಕಟಿಸ ಹತ್ತಿದರು. ಇವುಗಳಿಂದಾಗಿ 'ಕೈಕಾಗದ' ಬಳಸಿ, ಪ್ರಕಟಣೆ ನಿಲ್ಲದಂತೆ ಕಾಳಜಿ ವಹಿಸಿದರು. ಇಂಥ ಕಠಿಣ ಪ್ರಸಂಗದಲ್ಲಿಯೂ "ವರ್ಷಕ್ಕೊಂದು ಪುಸ್ತಕ" ಪ್ರಕಟಣೆ ಯೋಜನೆಯನ್ನು ತಪ್ಪದೆ ನಡೆಸಿಕೊಂಡು ಬಂದರು. ಮಂಜಪ್ಪ ಅವರು ಗ್ರಂಥ ಪ್ರಕಟಣೆಯನ್ನು ಒಂದು ವ್ರತವಾಗಿ ಪಾಲಿಸಿದರು. "ಆಗ ಕನ್ನಡದಲ್ಲಿ ಆಧುನಿಕ ವಿಚಾರದ ಕನ್ನಡ ಪುಸ್ತಕಗಳ ಕೊರತೆಯಿದ್ದಿತು."[1] ಈ ಕೊರತೆಯನ್ನು ನೀಗಿಸಲು ತಾವೇ ಗ್ರಂಥ ಬರೆದು, ತಾವೇ ಪ್ರಕಟಿಸುವ ಉಪಕ್ರಮ ಆರಂಭಿಸಿದರು. ಮಂಜಪ್ಪ ಅವರು ತಾವು ಬರೆದ ಗ್ರಂಥಗಳನ್ನು ಬೆಂಗಳೂರಿನ ಒಕ್ಕಲಿಗರ ಪ್ರೆಸ್ ಹಾಗೂ ಬೆಳಗಾವಿಯ ಮಹಾವೀರ ಮುದ್ರಣಾಲಯಗಳಿಂದಲೂ ಪ್ರಕಟಿಸಿದ್ದಾರೆ.

ಮಂಜಪ್ಪ ಅವರು ಹೆಚ್ಚಾಗಿ ರಾಷ್ಟ್ರೀಯ ಪ್ರಜ್ಞೆಯ ಜನಪ್ರಿಯ ಗ್ರಂಥಗಳನ್ನೇ ಪ್ರಕಟಿಸಿದ್ದಾರೆ. ಅಂದಿನ ಕಾಲದಲ್ಲಿ ಇವರ ಬರವಣಿಗೆಗೆ ಬೆಲೆಯಿದ್ದಿತು. ಇವರ ಬಗೆಗೆ ಗೌರವವಿದ್ದಿತು. ಇವರ ಗ್ರಂಥಗಳ ಪ್ರಕಟನೆಗೆ ವ್ಯಾಪಕವಾದ ಸ್ವಾಗತವಿದ್ದಿತು. ಇದಕ್ಕೆ "ನನ್ನ ಯಾವ ಪುಸ್ತಕಗಳೂ ಮೂಲೆಗೆ ಬೀಳದೆ ಲಾಭದಾಯಕವಾಗಿಯೇ ಪರಿಣಮಿಸಿದವು"[2] ಎಂಬ ಮಂಜಪ್ಪ ಅವರ ಮಾತೇ ಆಧಾರವೆನಿಸಿದೆ.

1920ರಿಂದ ಗ್ರಂಥ ರಚನೆ ಹಾಗೂ ಪ್ರಕಟಣೆಯೇ ಮಂಜಪ್ಪ ಅವರ ಪರಮ ಧ್ಯೇಯವಾಯಿತು. ಈ ಧ್ಯೇಯ ಸಾಧನೆಗಾಗಿ ಅವರು ರಾಷ್ಟ್ರಜೀವನ ಗ್ರಂಥಮಾಲೆ, ಸತ್ಯಾಗ್ರಹ, ಗ್ರಂಥಾವಳಿ, ಜ್ಞಾನೋದಯ ಗ್ರಂಥಮಾಲೆ, ಜನಜಾಗೃತಿ ಗ್ರಂಥಮಾಲೆ, ಮಕ್ಕಳ ಸಾಹಿತ್ಯಮಾಲೆ, ಪ್ರಗತಿ ಗ್ರಂಥಮಾಲೆ, ವೀರಶೈವ ವಿದ್ಯಾಲಯ ಗ್ರಂಥಮಾಲೆಗಳನ್ನು ರೂಪಿಸಿಕೊಂಡು ಕಾರ್ಯಪ್ರವೃತ್ತರಾದರು.

'ರಾಷ್ಟ್ರಜೀವನ ಗ್ರಂಥಮಾಲೆ' ಮೂಲಕ ಸ್ವಾಮಿ ರಾಮತೀರ್ಥರ ಸಮಗ್ರ ಉಪನ್ಯಾಸಗಳನ್ನು ಪ್ರಕಟಿಸುವ ಯೋಜನೆ ಹಾಕಿಕೊಂಡರು. ಈ ಗ್ರಂಥಮಾಲೆಯಿಂದ ವರ್ಷಕ್ಕೆ 4 ಗ್ರಂಥ ಪ್ರಕಟಿಸುವ ಯೋಚನೆ ಮಾಡಿದರು. "ಗ್ರಂಥ ಮಾಲೆಯ ಕಾರ್ಯ ನಿಂತ ನಂತರ ಅವರ ಹಣ ಅವರಿಗೆ ತಿರುಗಿ ಕೊಡುವ"[3] ಕರಾರಿನ ಮೇಲೆ 19 ಜನ ಪ್ರೋತ್ಸಾಹಕರಾದರು. ಇವರಲ್ಲಿ ಪ್ರತಿಯೊಬ್ಬ ವ್ಯಕ್ತಿ 25 ರೂಪಾಯಿ ವಂತಿಗೆ ಸಲ್ಲಿಸಿದರು. ಈ 25 ರೂಪಾಯಿಗಳ ಬಡ್ಡಿಯಲ್ಲಿ ಪ್ರೋತ್ಸಾಹಕರಿಗೆ ಪುಸ್ತಕಗಳನ್ನು ಉಚಿತವಾಗಿ ಪೂರೈಸುತ್ತಿದ್ದರು. ಈ ಗ್ರಂಥಮಾಲೆಯಿಂದ ನಡೆಯುವ ಗ್ರಂಥಗಳ ಪ್ರಕಟಣೆಗಾಗಿ ಹಿರೇಕೆರೂರಿನ ಕುಬಸದ ಶ್ರೀ ದೊಡ್ಡ ಅಡಿವೆಪ್ಪ ಅವರು ಬಡ್ಡಿ ರಹಿತವಾಗಿ 1000 ರೂಪಾಯಿಗಳ ಸಹಾಯ ಮಾಡುವುದಾಗಿ ಹೇಳಿ 700 ರೂಪಾಯಿ ಕೊಟ್ಟರು.

ಭಾರತೀಯರ ದೇಶಭಕ್ತಿ, ವೀರಶೈವ ಸಮಾಜ ಸುಧಾರಣೆ, ಸ್ವಾಮಿರಾಮ ತೀರ್ಥರ ಉಪನ್ಯಾಸ (4 ಭಾಗ)–ಹೀಗೆ 6 ಗ್ರಂಥಗಳನ್ನು 1921ರಲ್ಲಿ ಪ್ರಕಟಿಸಿದರು. 1923ರಲ್ಲಿ 'ರಾಷ್ಟ್ರಜೀವನ ಗ್ರಂಥಮಾಲೆ'ಯನ್ನು ನಿಲ್ಲಿಸಿ, ಈ ಗ್ರಂಥಮಾಲೆಗೆ ಹಣ ಸಹಾಯ ಮಾಡಿದವರಿಗೆ ಹಣ ಮರಳಿ ಸಂದಾಯ ಮಾಡಿದರು. ಹಿರೇಕೆರೂರ ಅಡಿವೆಪ್ಪ ಅವರಿಗೆ ಮಾತ್ರ ಕೊಡಬೇಕಾದ ಹಣಕ್ಕಾಗಿ ತಮ್ಮ ಎಲ್ಲ ಪುಸ್ತಕಗಳನ್ನೇ ಶ್ರೀ ಬಾಳಪ್ಪ ಅವರ ಮೂಲಕ ಕೊಟ್ಟು ಕಳಿಸಿದರು.

ಗುರುಮಠಕಲ್ಲ ಶ್ರೀ ಶಾಂತವೀರಸ್ವಾಮಿಗಳು 'ಬ್ರಹ್ಮಚರ್ಯ' ಗ್ರಂಥ ಪ್ರಕಟಣೆಗಾಗಿಯೂ ಶೇಟ್ ರುಸ್ತುಮಜಿಭಾಯಿ ಮುಣೆಗಾರ ಖಾದಿ ಮತ್ತು ಅಹಿಂಸಾ ಕೃತಿಗಳ ಪ್ರಕಾಶನಕ್ಕಾಗಿಯೂ ಧನಸಹಾಯ

ಸಲ್ಲಿಸಿದರು. ಹೀಗೆ 1915 ರಿಂದ 1923ರವರೆಗೆ 15 ಪುಸ್ತಕಗಳ ಪ್ರಕಾಶನ ಕಾರ್ಯವನ್ನು ಒಬ್ಬಂಟಿಗರಾಗಿಯೇ ಪೂರೈಸಿದರು. ಇದು ಮಂಜಪ್ಪ ಅವರ ಪ್ರಕಾಶನದ ದಕ್ಷತೆಯನ್ನು ಕರ್ತವ್ಯ ಪಟುತ್ವವನ್ನೂ ಪ್ರತಿನಿಧಿಸುತ್ತದೆ.

1924ರ ಬೆಳಗಾವಿಯ ರಾಷ್ಟ್ರೀಯ ಕಾಂಗ್ರೆಸ್ ಸಭೆಗಾಗಿ 'ಸತ್ಯಾಗ್ರಹಿ ಬಸವೇಶ್ವರ' ಎಂಬ ಚಿಕ್ಕ ಪುಸ್ತಕವನ್ನು ಭಿಡೆ ಲಕ್ಷ್ಮಣರಾಯರಿಂದ ಹಿಂದಿ-ಮರಾಠಿ ಭಾಷೆಗಳಲ್ಲಿ ಬರೆಯಿಸಿ, ಪ್ರಕಟಿಸಿದುದಲ್ಲದೆ ಸಾವಿರಾರು ಪ್ರತಿಗಳನ್ನು ಪರಪ್ರಾಂತದವರಿಗೆ ಉಚಿತವಾಗಿ ಹಂಚಿದರು. ಈ ಗ್ರಂಥದ ಪ್ರಕಟಣೆಗೆ ಸಾಬೋಜಿ ಗಂಗಾಧರಪ್ಪ ಅವರು ಧನಸಹಾಯ ಮಾಡಿದರು. ಏಕಲವ್ಯ, ಬಸವಣ್ಣ ಮುಂತಾದ ಮಹಾಪುರುಷರ ಜೀವನ ಚರಿತ್ರೆಗಳನ್ನು ಮಕ್ಕಳಿಗಾಗಿಯೇ ರಚಿಸಿ, ದೊಡ್ಡ ಅಕ್ಷರಗಳಲ್ಲಿ ಮುದ್ರಿಸಿದರು. ಮಟ್ಟಿಕಲ್ಲಿ ರುದ್ರಪ್ಪ ಅವರ ಧನಸಹಾಯದಿಂದ 'ಭಜನಾವಳಿ' ಪುಸ್ತಕ ಪ್ರಕಟಗೊಂಡಿತು.

ಮಂಜಪ್ಪ ಅವರು ಆಲಮಟ್ಟಿಯ ತಮ್ಮ 'ಬಸವಲಿಂಗ ಮುದ್ರಣ ಮಂದಿರ'ದಿಂದ (1929 1936ರವರೆಗೆ) 7 ವರ್ಷಗಳ ಅವಧಿಯಲ್ಲಿ ಕಾಯಕವೇ ಕೈಲಾಸ, ವೀರಶೈವ ಮತಬೋಧೆ, ವೀರಶೈವ ಮತತತ್ವ, ಆದಿಜನ ಸುಧಾರಣೆ, ದಾಂಪತ್ಯಧರ್ಮ, ಬಸವಣ್ಣ ಅವರ ಶುದ್ಧಿ ಮತ್ತು ಸಂಘಟನೆ ಕೃತಿಗಳ ಪ್ರಕಟಣೆಗೆ ಗಜೇಂದ್ರಗಡದ ಅಂದಾನೆಪ್ಪ ಕುಂದರಗಿ ಅವರು ಧನಸಹಾಯ ಮಾಡಿದರು. ಮಂಜಪ್ಪನವು 1947 ವರೆಗೆ ಸುಮಾರು 80 ಗ್ರಂಥಗಳನ್ನು ಪ್ರಕಟಿಸಿದರು.

ಹೀಗೆ ಮಂಜಪ್ಪ ಅವರು ಪ್ರತಿಕಾ ಸಾಹಿತ್ಯ, ರಾಷ್ಟ್ರೀಯ ಸಾಹಿತ್ಯ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ, ವಿಚಾರ ಸಾಹಿತ್ಯ, ಸಂಶೋಧನ ಸಾಹಿತ್ಯ ಮತ್ತು ಭಾಷಾಂತರ ಸಾಹಿತ್ಯಗಳನ್ನು ರಚಿಸಿ-ಪ್ರಕಟಿಸಿ, ನಾಡಿನ ಜನರಿಗೆ ಜ್ಞಾನದಾಸೋಹ ಮಾಡಿದ್ದಾರೆ. ಪತ್ರಿಕೆ ಮತ್ತು ಗ್ರಂಥಗಳ ಪ್ರಕಟಣೆಗಾಗಿ ಊರೂರು ಅಲೆದಿದ್ದಾರೆ. ಕಷ್ಟಗಳನ್ನು ಅನುಭವಿಸಿದ್ದಾರೆ. ಹಣದ ಕೊರತೆಯಿಂದ ಕೆಲವು ಪ್ರಕಾಶನ ಮಾಲೆಗಳನ್ನು ನಿಲ್ಲಿಸಿದ್ದಾರೆ. ಜನರ ಧನಸಹಾಯದಿಂದಲೂ ತಮ್ಮ ಬಂಡವಾಳದಿಂದಲೂ ಗ್ರಂಥ ಪ್ರಕಟಣ ಕಾರ್ಯ ಬತ್ತದಂತೆ ನೋಡಿಕೊಂಡಿದ್ದಾರೆ. ಇದು ಮಂಜಪ್ಪ ಅವರು ಕನ್ನಡ ಗ್ರಂಥ ಪ್ರಸಾರಕ್ಕಾಗಿ ಪಟ್ಟ ಪಾಡು, ಅನುಸರಿಸಿದ ಮಾರ್ಗ, ಸಾಧಿಸಿದ ಸಿದ್ಧಿಯ ಸ್ಥೂಲಚಿತ್ರ.

**ಹೊಸ ಗ್ರಂಥಮಾಲೆಯ ಯೋಜನೆಯ ರೂಪ ರೇಷೆಗಳು**

ತಮ್ಮ 61ನೇ (6-2-1946) ಹುಟ್ಟು ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲು ಮಂಜಪ್ಪ ಅವರು 'ಪ್ರಗತಿ ಗ್ರಂಥಮಾಲೆ' ಪ್ರಾರಂಭಿಸುವ ಹಿರಿಯ ಹಂಬಲ ಇಟ್ಟುಕೊಂಡಿದ್ದರು. ಈ ಹೊಸ ಗ್ರಂಥಮಾಲೆಯ ಯೋಜನೆಯ ರೂಪ ರೇಷೆಗಳನ್ನೂ ಕೆಳಗಿನಂತೆ ಸಿದ್ಧಪಡಿಸಿದ್ದರು.

"ಕಳೆದ ವರುಷಗಳಿಂದ ನನಗೆ ಅವಕಾಶ ದೊರೆತಾಗಲೆಲ್ಲಾ ಓದಿ "ಋಗ್ವೇದ ಸಾರ" ಎಂಬ ಕನ್ನಡ ಸಾಹಿತ್ಯದಲ್ಲಿಯೇ ಹೊಸದಾದ ಸುಮಾರು 400 ಪುಟಗಳ ಒಂದು ಗ್ರಂಥವನ್ನು ಬರೆದಿದ್ದೇನೆ. ಇದನ್ನು ಅಚ್ಚು ಮಾಡಿಸಲು ಸುಮಾರು ಮೂರು ಸಾವಿರ ರೂ.ವೆಚ್ಚ ಬರಬಹುದಾಗಿದೆ. ಒಂದೊಂದು ನೂರು ರೂಪಾಯಿ ಕೊಡುವ ಮೂವತ್ತು ಜನ ಮಹನೀಯರ ಸಹಾಯದಿಂದ ಅಚ್ಚಾಗುವ ಈ ಗ್ರಂಥವನ್ನೇ ಆ ದಿನ ಪ್ರಕಟಿಸಬೇಕೆಂದು ಯೋಚಿಸಿದ್ದೇನೆ. ಕಾಲಮಾನಕ್ಕೆ ತಕ್ಕಂತಹ ಗ್ರಂಥಗಳನ್ನು ಹಿಂದಿ, ಮರಾಠಿ ಮೊದಲಾದ ದೇಶ ಭಾಷೆಗಳಲ್ಲಿ ವಿದ್ವಾಂಸರಿಂದ ಬರೆಯಿಸಿ ಪ್ರಚಾರಗೊಳಿಸತಕ್ಕ ಸಂಘ-ಸಂಸ್ಥೆಗಳು ಬೇರೆ ಪ್ರಾಂತಗಳಲ್ಲಿ ಅನೇಕ ಇವೆ. ಹೆಚ್ಚಾದ ಬಂಡವಾಳವನ್ನು ಈ ಕಾರ್ಯಕ್ಕಾಗಿ ಉಪಯೋಗಿಸಿ ವ್ಯಾಪಾರ ದೃಷ್ಟಿಯಿಂದಲೂ ಇದೊಂದು ಲಾಭದಾಯಕವಾದ ಉದ್ಯೋಗವನ್ನಾಗಿಯೇ ಅನೇಕರು ಮಾಡಿಕೊಂಡಿರುವುದೂ ಉಂಟು. ಆದರೆ

ನಮ್ಮ ಕನ್ನಡ ನಾಡಿನಲ್ಲಿ ಮಾತ್ರ ಇಂಥ ಹೆಚ್ಚಿನ ಪ್ರಯತ್ನ ಈವರೆಗೆ ನಡೆದಿಲ್ಲ.

ಈಗತಾನೆ ಮುಗಿದ ಮಹಾಯುದ್ಧದಿಂದ ಜಗತ್ತಿನಲ್ಲಿ ಇನ್ನು ಮುಂದೆ ಅನೇಕ ಹೊಸ ವಿಷಯಗಳು ತಲೆದೋರುವುವು. ಸಾಂಪತ್ತಿಕ, ಸಾಮಾಜಿಕ, ವೈಜ್ಞಾನಿಕ ಮತ್ತು ಶೈಕ್ಷಣಿಕ ಮೊದಲಾದ ವಿಷಯಗಳಲ್ಲಂತೂ ಎಷ್ಟೋ ವಿಚಾರಕ್ರಾಂತಿಯಾಗು ವುದು. ಜಗತ್ತಿನ ಪುನರ್ಘಟನೆಯ ಕುರಿತು ಪಾಶ್ಚಾತ್ಯ ದೇಶಗಳ ಸಮತಾವಾದ ಮೊದಲಾದ ಅನೇಕ ಹೊಸ ವಿಚಾರತರಂಗಗಳೂ ದೇಶಕ್ಕೆ ಬರುವುವು. ನಮ್ಮ ರಾಷ್ಟ್ರ ಸಂಘಟನೆಗೆ ಧಾರ್ಮಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕ ಮೊದಲಾದ ವಿಷಯಗಳ ನಿಜತತ್ವ ಪ್ರಸಾರವು ಅಗತ್ಯವಾಗಿಯೇ ಪರಿಣಮಿಸುವುದು.

ಆಧುನಿಕ ಪ್ರಪಂಚದ ವಿವಿಧ ವೈಜ್ಞಾನಿಕ ಸಚಿತ್ರ ಪುಸ್ತಕಗಳು ಪ್ರಾಥಮಿಕ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳ ಕೈಯಲ್ಲಿ ಬರುವಂತೆ ಮಾಡುವುದು ಅವರ ಆ ಸಂಬಂಧವಾದ ಬುದ್ಧಿಯ ಬೆಳವಣಿಗೆಗೆ ಬಹು ಸಹಾಯವಾಗುವ ಕಾರಣ ಇನ್ನು ಮುಂದೆ ಇಂಥ ವೈಜ್ಞಾನಿಕ ಜ್ಞಾನಪ್ರಸಾರದ ಕಾರ್ಯವು ಹೆಚ್ಚು ಅಗತ್ಯವಾಗಿಯೇ ಪರಿಣಮಿಸುವುದು.

ಕೇವಲ ಕನ್ನಡ ಓದು ಬರಹಗಳನ್ನೇ ಅರಿತಿರುವ ನಾಡಿನ ಬಹು ಸಂಖ್ಯಾಕರಲ್ಲಿ ಈ ಎಲ್ಲ ಪ್ರಗತಿಪರ ವಿಚಾರ ಪ್ರಸಾರವಾಗಬೇಕಾದರೆ ಅಂತಹ ಗ್ರಂಥಗಳು ಹೆಚ್ಚು ಪ್ರಕಟವಾಗಬೇಕಾದುದು ಅವಶ್ಯವಾಗಿದೆ. ಈ ಕಾರ್ಯ ವೈಯಕ್ತಿಕವಾಗಿ ಹೆಚ್ಚು ಪ್ರಕಟವಾಗಬೇಕಾಗದುದು ಅವಶ್ಯವಾಗಿದೆ. ಈ ಕಾರ್ಯ ವೈಯಕ್ತಿಕವಾಗಿ ಹೆಚ್ಚು ಪ್ರಮಾಣದಿಂದ ಸಾಗಲಾರದು. ವಿದ್ವಾಂಸರ ಮತ್ತು ಧನಿಕರ ಶಕ್ತಿಗಳೆರಡೂ ಕೂಡಿದಾಗಲೇ ಈ ಮಹತ್ವದ ಕಾರ್ಯ ನೆರವೇರುವುದು. ಹಾಗೆ ಆ ಶಕ್ತಿಗಳನ್ನು ಕೂಡಿಸಲು ಒಂದು ಸಂಘವು ಅಗತ್ಯವಾಗಿದೆ. ಆದುದರಿಂದ ಆ ನನ್ನ ಹುಟ್ಟು ದಿನಗಳಲ್ಲಿ "ಪ್ರಗತಿ ಗ್ರಂಥ ಸಮಿತಿ" ಎಂಬುದನ್ನು ಸ್ಥಾಪಿಸಬೇಕೆಂದು ಯೋಚಿಸಿದ್ದೇನೆ.

ಆ ಸಮಿತಿಯು ತಾನು ಇಂತಹ ಪುಸ್ತಕಗಳನ್ನು ಬರೆಯುವುದಲ್ಲದೆ ನಮ್ಮ ನಾಡಿನ ಉತ್ತಮ ಲೇಖಕ ಮಹಾಶಯರಿಗೆ ಯೋಗ್ಯ ಸಂಭಾವನೆಯನ್ನು ಕೊಟ್ಟು ಅವರಿಂದ ಸ್ವತಂತ್ರವಾದ ಅಥವಾ ಇಂಗ್ಲಿಷ್, ಹಿಂದಿ, ಮರಾಠಿ ಮೊದಲಾದ ಭಾಷೆಗಳಲ್ಲಿರುವ ಗ್ರಂಥಗಳ ಅನುವಾದದ ಪುಸ್ತಕಗಳನ್ನು ಬರೆಯಿಸಿ ಅವುಗಳ ಸರ್ವಾಧಿಕಾರವನ್ನು ತಾನು ತೆಗೆದುಕೊಂಡು ಮುದ್ದಾಗಿ ಮುದ್ರಿಸಿ ಆದಷ್ಟು ಸುಲಭ ಬೆಲೆಗೆ ದೊರೆಯುವಂತೆ ಮಾಡುವುದು.

ಹೀಗೆ ಮಾಡುವುದರಿಂದ ನಮ್ಮ ನಾಡಿನ ಅನೇಕ ಲೇಖಕ ಮಹಾಶಯರಿಗೆ ಎಷ್ಟೋ ನೆರವಾದಂತಾಗು ವುದಲ್ಲದೆ ಅವರ ಬುದ್ಧಿಶಕ್ತಿಯನ್ನು ನಮ್ಮ ನಾಡು–ನುಡಿಗಳ ಸೇವೆಗೆ ಉಪಯೋಗಿಸಿಕೊಂಡಂತಾ ಗುವುದು. ಅನೇಕ ಲೇಖಕ ಮಹಾಶಯರಿಗೆ ಸಾಂಪತ್ತಿಕ ಅನುಕೂಲತೆ ಇಲ್ಲದ್ದರಿಂದ ಅವರ ಮಹತ್ವದ ಬುದ್ಧಿಶಕ್ತಿಯು ನಾಡಿಗೆ ಉಪಯೋಗವಾಗುತ್ತಾ ಇಲ್ಲ. ಇದೊಂದು ನಮ್ಮ ನಾಡಿಗೆ ಮಹತ್ತರವಾದ ನಷ್ಟ. ಇದನ್ನು ನಿವಾರಣೆ ಮಾಡಲು ಈ ಸಮಿತಿಯು ಪ್ರಯತ್ನಿಸುವುದು.

ಈ ಗ್ರಂಥ ಪ್ರಚಾರಕ ಸಮಿತಿಯಲ್ಲಿ ನನ್ನನ್ನೊಳಗೊಂಡು ಮುದ್ರಣ ಕಲೆಯನ್ನರಿತ ಮತ್ತು ವ್ಯಾಪಾರ ದೃಷ್ಟಿಯಿಂದ ಪ್ರಚಾರಗೊಳಿಸಬಲ್ಲ ಐದು ಜನರು ಇರುವರು. ಇದು 1860ನೆಯ ಶಾಸನದ ಪ್ರಕಾರ ರಿಜಿಸ್ಟರ್ ಮಾಡಲ್ಪಡುವುದು. ಇದರ ಮುಖ್ಯ ಕಾರ್ಯಾಲಯ ಧಾರವಾಡಲ್ಲಿ ಏರ್ಪಡುವುದು. ಸಂಘದಲ್ಲಿಯ ಒಬ್ಬರು ಕಾರ್ಯದರ್ಶಿಗಳಾಗಿ ಮುದ್ರಣ, ಪುಸ್ತಕ ವಿಕ್ರಯ ಮೊದಲಾದ ಕೆಲಸಗಳನ್ನು ಅಲ್ಲಿ ನಡೆಸುವರು. ನಾನು ಸಂಚಾಲಕನಾಗಿರುವೆನು. ಸಮಿತಿಯವರೆಲ್ಲರು ಈ ಕಾರ್ಯವನ್ನು ಉಚಿತವಾಗಿಯೇ ನಡೆಯಿಸುವರು. ಆದರೆ ಕಾರ್ಯದರ್ಶಿಗಳು ಸಮಿತಿಯ ಕೆಲಸಗಳಿಗೆ ಯೋಗ್ಯರನ್ನು ವೇತನಕೊಟ್ಟು ಇಟ್ಟುಕೊಳ್ಳವರು ಮತ್ತು ಪುಸ್ತಕ ವಿಕ್ರಯದ ಮೇಲೆ ದಲಾಲಿಯನ್ನು ಹೊಂದುವರು.

ಈ ಸಮಿತಿಯು ಯಾವ ಪುಸ್ತಕ ಬರೆಯಿಸಬೇಕೆಂಬುದನ್ನು ತಿಳಿಸಲಿಕ್ಕೂ ಬರೆಯಿಸಿದ ಪುಸ್ತಕಗಳಲ್ಲಿ ಆಗಬೇಕಾದ ಸುಧಾರಣೆ ಮತ್ತು ತಿದ್ದುಪಾಟಗಳನ್ನು ಸೂಚಿಸಲಿಕ್ಕೂ ಕೆಲವು ತಜ್ಞರು ಬೇಕಾದುದು ಅಗತ್ಯವಾಗಿರುವುದರಿಂದ ರಾ॥ಬ॥ ಫ.ಗು.ಹಳಕಟ್ಟಿಯವರು, ಡಾ. ನಂದೀಮಠ ಅವರು, ಪ್ರಿನ್ಸಿಪಾಲರು, ಬಾಗಲಕೋಟೆ ಬವಸವೇಶ್ವರ ಕಾಲೇಜು, ಶ್ರೀಮಾನ್ ಶಂ.ಭಾ.ಜೋಶಿ ಅವರು ಈ ಸಮಿತಿಗೆ ಸಲಹೆಗಾರರಾಗಲು ನಾನು ಪ್ರಾರ್ಥಿಸಿಕೊಳ್ಳಲು ಕೃಪೆಯಿಟ್ಟು ಅವರು ಒಪ್ಪಿರುವುದು ತುಂಬಾ ಸಂತೋಷದ ಸಂಗತಿಯಾಗಿದೆ. ಆ ಹುಟ್ಟು ದಿನದಲ್ಲಿ ಪ್ರಕಟವಾಗುವ ಪುಸ್ತಕವು ಈ ಸಮಿತಿಯ ಮೊದಲನೆಯ ಗ್ರಂಥವಾಗಿ ಪರಿಣಮಿಸುವುದು. ಅದರ ಕ್ರಯ 5ರೂ. ಅಚ್ಚಾಗುವ ಒಂದು ಸಾವಿರ ಪ್ರತಿಗಳನ್ನೂ ಈ ಸಮಿತಿಗೇನೇ ಕೊಡುವೆನು. ಇದಕ್ಕೆ ಧನ ಸಹಾಯ ಮಾಡಿದ ಮೂವತ್ತು ಜನ ಮಹಾಶಯರನ್ನು ಈ ಸಮಿತಿಯ ಸಹಾಯಕರೆಂದೇ ತಿಳಿದುಕೊಳ್ಳುವುದು. ಒಂದು ವರ್ಷಕ್ಕೆ ಆರು ಪುಸ್ತಕಗಳನ್ನಾದರೂ ಪ್ರಕಟಿಸಬೇಕೆಂದು (ಈಗಿನ ಕಾಗದದ ಮತ್ತು ಮುದ್ರಣದ ನಿರ್ಬಂಧ ನಿವಾರಣೆಯಾದ ಮೇಲೆ) ಯೋಚಿಸಿದ್ದೇನೆ.

ಲಿಂಗೈಕ್ಯರಾದ ನನ್ನ ಅಣ್ಣ ಧಾರವಾಡದ ಲಿಂಗರಾಜ ಆರ್ಟ ಪ್ರೆಸ್ ಒಡೆಯರು ಮಧುಲಿಂಗಪ್ಪ ಅವರ ಸ್ಮಾರಕನಿಧಿಯಿಂದ ಈ ಸಮಿತಿಗೆ ಆ ನನ್ನ ಹುಟ್ಟು ದಿನದಲ್ಲಿ 1001ರೂ. ಗಳನ್ನು ಸಲ್ಲಿಸಬೇಕೆಂದಿದ್ದೇನೆ. ಹೀಗೆ ಆ ದಿನ ಸಮಿತಿಗೆ ಒಂದು ಸಾವಿರ ಗ್ರಂಥಗಳನ್ನೂ ಸ್ವಲ್ಪ ಧನವನ್ನೂ ಒಪ್ಪಿಸಬೇಕೆಂದು ಗೊತ್ತು ಮಾಡಿದ್ದೇನೆ.

ಈ ಕಾರ್ಯಕ್ಕೆ ಉದಾರಿಗಳಿಂದ ಎಷ್ಟು ಹೆಚ್ಚು ಧನಸಹಾಯವಾಗುವುದೋ ಅಷ್ಟು ಆದರೆ ಅದು ಪರಿಣಾಮಕಾರಿಯಾಗಿ ಜರಗುವುದಷ್ಟೆ. ಆದ ಕಾರಣ ಹಣವನ್ನು ಸೇರಿಸಲು ಈ ಕೆಳಗಿನಂತೆ ಆರು ತರದ ನಿಯಮಗಳನ್ನು ಮಾಡಬೇಕೆಂದಿದ್ದೇನೆ.

- ಈ ಸಮಿತಿಗೆ 1000ರೂ. ಗಳಗಿಂತ ಹೆಚ್ಚು ಧನಸಹಾಯ ಮಾಡುವವರು ಸಮಿತಿಯ ಮಹಾಪೋಷಕರು. 500ರೂ. ಗಳಿಂದ 1000ರೂ.ಗಳವರೆಗೆ ಸಮಿತಿಗೆ ಹಣವನ್ನು ಕೊಟ್ಟವರು ಸಮಿತಿಯ ಪೋಷಕರು.
- ಈ ಮಹಾಪೋಷಕರ ಮತ್ತು ಪೋಷಕರ ಭಾವಚಿತ್ರಗಳನ್ನು ಸಮಿತಿಯು ಪ್ರಕಟಿಸುವ ಪ್ರತಿಯೊಂದು ಪುಸ್ತಕದಲ್ಲಿಯೂ ಮುದ್ರಿಸುವುದು ಮತ್ತು ಮಹಾಪೋಷಕರಿಗೆ 20 ವರುಷಗಳವರೆಗೆ, ಪೋಷಕರಿಗೆ 10 ವರುಷಗಳ ವರೆಗೆ ಸಮಿತಿಯಿಂದ ಪ್ರಕಟವಾಗುವ ಎಲ್ಲ ಪುಸ್ತಕಗಳನ್ನು ಉಚಿತವಾಗಿ ಕೊಡುವುದು.
- 250ರಿಂದ 500ರೂ. ಗಳವರೆಗೆ ಸಹಾಯ ಮಾಡುವವರು ಆಶ್ರಯದಾತರೆಂದು ತಿಳಿದು ಅವರ ಹೆಸರನ್ನು ಸಮಿತಿಯ ಪ್ರತಿಯೊಂದು ಪುಸ್ತಕದಲ್ಲಿಯೂ ನಿರ್ದೇಶನಗೊಳಿಸಿ 5 ವರುಷಗಳವರೆಗೆ ಸಮಿತಿಯ ಎಲ್ಲ ಪುಸ್ತಕಗಳನ್ನು ಉಚಿತವಾಗಿ ಕೊಡುವುದು.
- 100 ರಿಂದ 250ರೂ. ಗಳವರೆಗೆ ಧನಸಹಾಯ ಮಾಡುವವರು ಸಮಿತಿಯ ಸಹಾಯಕರೆಂದು ತಿಳಿದು ಮೂರು ವರುಷಗಳವರೆಗೆ ಸಮಿತಿಯ ಪುಸ್ತಕಗಳಲ್ಲೆಲ್ಲ ಅವರ ನಾಮನಿರ್ದೇಶ ಮಾಡಲಾಗುವುದು.
- 50 ರಿಂದ 100ರೂ. ಗಳವರೆಗೆ ಧನಸಹಾಯ ಮಾಡುವವರು ಸಮಿತಿಯ ಪೋತ್ಸಾಹಕರೆಂದು ತಿಳಿದು ಒಂದು ವರುಷದ ಪುಸ್ತಕಗಳನ್ನೆಲ್ಲಾ ಅವರಿಗೆ ಉಚಿತವಾಗಿ ಕೊಡುವುದಲ್ಲದೆ ಆ ವರುಷ ಪ್ರಕಟವಾದ ಪುಸ್ತಕಗಳಲ್ಲಿ ಅವರ ಹೆಸರನ್ನು ಉಲ್ಲೇಖಿಸಲಾಗುವುದು.
- 25 ರಿಂದ 50ರೂ. ವರೆಗೆ ಧನಸಹಾಯ ಮಾಡುವವರು ಸಮಿತಿಯ ಹಿತೈಷಿಗಳೆಂದು ಅವರಿಗೆ ಒಂದು ವರುಷದ ಸಮಿತಿಯ ಪುಸ್ತಕಗಳನ್ನೆಲ್ಲಾ ಉಚಿತವಾಗಿ ಕೊಡಲಾಗುವುದು.

ಈ ಆರು ಪ್ರಕಾರಗಳಲ್ಲಿ ಯಾವ ರೀತಿಯಿಂದಲಾದರೂ ಸಮಿತಿಗೆ ಧನಸಹಾಯ ಮಾಡಿದ ಮಹಾಶಯರು ನಾಡು-ನುಡಿಗಳ ಸೇವೆಗೆ ಸಮಿತಿಯನ್ನು ಬಲ ಪಡಿಸಿದ ಶ್ರೇಯಸ್ಸಿಗೆ ಭಾಗಿಗಳಾಗುವರೆಂಬುದು ಮುಖ್ಯವಾದುದೇ ವಿನಾ ಸಮಿತಿಯ ಕೃತಜ್ಞತಾಪೂರ್ವಕ ತಾನು ಸಲ್ಲಿಸುವ ಪುಸ್ತಕ ಗೌರವಗಳೇನೂ ಗಣ್ಯವಾದವುಗಳಲ್ಲ.

ಸಮಿತಿಗೆ 25ರೂ.ಗಳಿಗಿಂತ ಕಡಿಮೆಯಾಗಿ ಯಾರು ಎಷ್ಟೇ ಹಣವನ್ನು ಕೊಟ್ಟರೂ ಕೃತಜ್ಞತಾಪೂರ್ವಕ ಅದನ್ನು ತೆಗೆದುಕೊಂಡು ಅವರಿಗೆ ಹಣ ಮುಟ್ಟಿದ ಪಾವತಿ ಕೊಡುವುದು. ಪ್ರತಿ ವರುಷ ಸಮಿತಿಯ ವರದಿಯನ್ನು ಪ್ರಕಟಿಸಿ ಅದರಲ್ಲಿ ಅವರ ಸಹಾಯವನ್ನು ನಿರ್ದೇಶನಗೊಳಿಸುವುದು.

ಈವರೆಗೆ ವಿವರಿಸಿರುವ ಸಂಗತಿಗಳಿಂದ ನನ್ನ ಯೋಜನೆಯ ರೀತಿಯು ತಮಗೆ ವೇದ್ಯವಾಗಿರಬಹುದು. ಮಹಾಯುದ್ಧದಿಂದ ಜನತೆಯಲ್ಲಿ ವಾಚನಾಭಿರುಚಿ ಹೆಚ್ಚಿದೆ. ಪ್ರಾಥಮಿಕ ಶಿಕ್ಷಣ ಪ್ರಸಾರವೂ ಹೆಚ್ಚುತ್ತಾ ಇದೆ. ಇಂಥ ಕಾಲದಲ್ಲಿ ತಾಯಿ ನುಡಿಯಲ್ಲಿಯೇ ಆಧುನಿಕ ವಿಚಾರಸರಣಿಯ ಎಲ್ಲ ತರಹದ ಗ್ರಂಥಗಳೂ ವಿಪುಲವಾಗಿ ಪ್ರಸಾರವಾದರೆ ನಾಡಿನಲ್ಲಿ ಹೊಸ ವಿಚಾರ ಜಾಗೃತಿಯಾಗಿ ಅದು ಬಲಗೊಳ್ಳಲು ಬಹು ಅನುಕೂಲವಾಗುತ್ತದೆಂದು ಹೇಳಬೇಕಾದುದೇ ಇಲ್ಲ. ತಾಯಿ ನುಡಿಯನ್ನು ಮಾತ್ರ ಬಲ್ಲ ಜನತೆಯ ಜಾಗೃತಿಯೇ ನಾಡಿನ ನಿಜವಾದ ಜಾಗೃತಿಯೆಂಬುದೂ ಯಥಾರ್ಥವಾದುದೇ ಸರಿಯಷ್ಟೆ ಎಂದ ಮೇಲೆ ಇಂಥ ಗ್ರಂಥ ಪ್ರಚಾರಕ ಕಾರ್ಯವು ಶಿಕ್ಷಣ ಪ್ರಸಾರದ ಕಾರ್ಯಗಳಲ್ಲಿ ಮಹತ್ವದ್ದೆಂದು ಇತ್ತ ಕಡೆಗೆ ನಮ್ಮ ನಾಡಿನ ಉದಾರಿಗಳು ಲಕ್ಷಿಸಿದ್ದಾದರೆ ಜನತೆಗೆ ಆತ್ಮಪಯುಕ್ತವಾದ ಪುಸ್ತಕಗಳು ಬಹು ಸ್ವಲ್ಪ ಬೆಲೆಗೆ ದೊರೆತು ಮಹತ್ತರವಾದ ಪ್ರಯೋಜನವನ್ನು ಉಂಟು ಮಾಡುವುವು.

ಈ ಸಮಿತಿಗೆ ಉದಾರಿಗಳಿಂದ ಕೊಡಲ್ಪಡುವ ಧನವನ್ನು ಭದ್ರವಾದ ಬ್ಯಾಂಕಿನಲ್ಲಿಟ್ಟು ಆಗಾಗ್ಗೆ ಬೇಕಾಗುವಷ್ಟು ಹಣವನ್ನು ತೆಗೆದುಕೊಂಡು ಉಪಯೋಗಿಸಿ ಪುಸ್ತಕಗಳ ವಿಕ್ರಯದಿಂದ ಬರುವ ಹಣವನ್ನು ಈ ನಿಧಿಗೇನೇ ಕೂಡಿಸಲಾಗುವುದು. ಆದ ಕಾರಣ ಸಮಿತಿಯ ಹಣವು ದಿನೇ ದಿನೇ ಹೆಚ್ಚುತ್ತ ಹೋಗಿ ಪುಸ್ತಕಗಳು ಆದಷ್ಟು ಜನತೆಗೆ ಕಡಿಮೆ ಬೆಲೆಗೆ ದೊರೆಯುವಂತಾಗುವುದೇ ವಿನಾಃ ನಷ್ಟವೇನೂ ಆಗುವ ಸಂಭವವೇ ಇಲ್ಲ."[4]

ಹೀಗೆ ಹಲವಾರು ಯೋಜನೆಗಳನ್ನು ರೂಪಿಸಿಕೊಂಡರು. ಆದರೆ ಈ ಯೋಜನೆಗಳು ಅನುಷ್ಠಾನಗೊಳ್ಳುವ ಮೊದಲೇ ಮಂಜಪ್ಪ ಅವರು ಅಕಾಲಿಕ ಮರಣ ಹೊಂದಿದರು. ಇದು ಕರ್ನಾಟಕದ ಗ್ರಂಥ ಪ್ರಕಟಣೆ ಹಾಗೂ ಪ್ರಸಾರಗಳಿಗೆ ಉಂಟಾದ ದೊಡ್ಡಹಾನಿ.'ಪ್ರಗತಿ ಗ್ರಂಥಮಾಲೆ' ಪ್ರಾರಂಭವಾಗಿದ್ದರೆ ಕನ್ನಡ ಗ್ರಂಥ ಪ್ರಕಟಣೆ ಮತ್ತು ಪ್ರಸಾರಗಳದೇ ಅದ್ವಿತೀಯ ಅಧ್ಯಾಯವಾಗುತ್ತಿತ್ತು.

ಗ್ರಂಥ ಪ್ರಕಟಣೆ ಸುಲಭದ ಮತ್ತು ಸಾಮಾನ್ಯರ ಕೆಲಸವಿಲ್ಲ. ಈ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಂಜಪ್ಪ ಅವರಿಗೆ ಅದು ಲಾಭದ ಮಾರ್ಗವಲ್ಲ, ಜನ ಹಿತದ ಮಾಧ್ಯಮ. ಈ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯಗಳಂಥ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮಿಗಿಲಾದ ಪ್ರಕಟಣೆ ಕಾರ್ಯವನ್ನೂ ಇವರು ವೈಯಕ್ತಿಕವಾಗಿ ಮಾಡಿತೋರಿಸಿದರು. ಹೀಗಾಗಿ ಖಾಸಗಿ ಮಟ್ಟದಲ್ಲಿ ಇವರು ಅಂಥು ಮಾಡಿದ ಗ್ರಂಥ ಪ್ರಕಟಣ ಕಾರ್ಯ ಅನುಪಮ, ಅನುಕರಣೀಯವಾದುದಾಗಿದೆ.

ಮಂಜಪ್ಪ ಅವರು ಗ್ರಂಥ ಪ್ರಸಾರಕರಾಗಿ ಮಾಡಿದ ಕಾರ್ಯ ಅಧ್ಭುತವೂ ಅಮೂಲ್ಯವೂ ಆದುದಾಗಿದೆ. 1906ರಲ್ಲಿ ಇವರು ಧನುರ್ಧಾರಿ ಪತ್ರಿಕೆಗೆ ಸಂಬಂಧಿಸಿದ ಪ್ರಕಟಣೆಯೊಂದನ್ನು ಮುದ್ರಿಸಿ, ಎಲ್ಲೆಡೆಗೂ ಹಂಚಿದರು. ಕನ್ನಡ 1ನೇ ಪುಸ್ತಕಕ್ಕೆ ತಾವೇ ಬರೆದ ಶಬ್ದಾರ್ಥ ಪ್ರತಿಗಳನ್ನು ಹಾವೇರಿಯ ಮಾಗಾವಿ ಸಿದ್ದಪ್ಪ ಅವರ ಸ್ಟೇಷನರಿ ಅಂಗಡಿಗೆ

ಮಾರಾಟಕ್ಕಾಗಿ ಕೊಟ್ಟರು. ಇದರಿಂದ ಮಂಜಪ್ಪ ಅವರು ಪ್ರಯಾಣಿಸುವಾಗ ತಮ್ಮ ಜೊತೆ ತಾವು ಬರೆದ ಗ್ರಂಥಗಳನ್ನೂ ಒಯ್ದು ಮಾರುತ್ತಿದ್ದರೆಂಬ ವಿಷಯ ಗೊತ್ತಾಗುತ್ತದೆ. 1915ರಲ್ಲಿ ಸ್ವಕರ್ತವ್ಯ ಸಿದ್ಧಾಂತದ 1000 ಪ್ರತಿಗಳು ಅಚ್ಚಾದವು. ಗ್ರಂಥದ ಬೆಲೆ 8 ಆಣೆ. ಹೀಗಾಗಿ ಈ ಪುಸ್ತಕ ಬಹಳಷ್ಟು ಜನಪ್ರಿಯವಾಯಿತು. 1 ವರ್ಷದಲ್ಲೇ ಮುದ್ರಣವೆಚ್ಚ ಮತ್ತು ಮತ್ತೊಂದು ಗ್ರಂಥದ ಪ್ರಕಟಣೆಗೆ ಸಾಕಾಗುವಷ್ಟು ಹಣ ಸಂದಾಯವಾಯಿತು. ತಮ್ಮ ಜನಪ್ರಿಯ ಗ್ರಂಥಗಳ ಪ್ರಸಾರದಿಂದ ಮಂಜಪ್ಪ ಅವರ ಕಾರ್ಯಕ್ಕೆ ಇನ್ನೂ ಉತ್ಸಾಹ ಉಕ್ಕಿ ಬಂದಿತು. 1923ರಲ್ಲಿ ಗ್ರಂಥಪ್ರಸಾರ ಕಾರ್ಯ ಅತ್ಯಂತ ತೃಪ್ತಿಕರವಾಗಿ ನಡೆಯಿತೆಂದು ಮಂಜಪ್ಪ ಅವರು ತಮ್ಮ ಆತ್ಮಚರಿತೆಯಲ್ಲಿ ಹೇಳಿಕೊಂಡಿದ್ದಾರೆ.

ಮಕ್ಕಳಿಗಾಗಿ ಇತರರು ಬರೆದ ಪುಲಿಕೇಶಿ, ವಿವೇಕಾನಂದ, ಲಾಲಾ ಲಜಪತರಾಯ ಗ್ರಂಥಗಳ ಹಾಗೂ ತಾವು ಬರೆದ ಏಕಲವ್ಯ, ಕಚದೇವ, ದೇವಯಾನಿ, ಸುಕಲಾದೇವಿ, ಬಸವಣ್ಣ, ಪ್ರಭುದೇವ, ಅಕ್ಕಮಹಾದೇವಿ, ಶರಣಬಸವೇಶ್ವರ, ವಿದ್ಯಾಲಯ ಭಜನಾವಳಿ, ರಾಷ್ಟ್ರಗೀತೆ ಗ್ರಂಥಗಳ ತಲಾ 2000ಪ್ರತಿ ಪ್ರಕಟ ಮಾಡಿದರು. ಇವುಗಳಲ್ಲಿ 'ಅಕ್ಕಮಹಾದೇವಿ' ಕೃತಿ ಮಾತ್ರ ಪುನರ್ಮುದ್ರಣವಾಯಿತು. 'ವೀರಶೈವ ಮತ ಬೋಧೆ' ಮರಾಠಿ, ತೆಲಗು ಭಾಷೆಗಳಿಗೆ ಅನುವಾದಗೊಂಡು ಬಹಳಷ್ಟು ಜನಪ್ರಿಯತೆ ಗಳಿಸಿತು. ಇದರ ಮೂರು ಆವೃತ್ತಿಗಳು ಹೊರಬಂದು, 500 ಪ್ರತಿ ಪ್ರಸಾರವಾದವು.

ಕಾಯಕವೇ ಕೈಲಾಸ, ವೀರಶೈವ ಮತತತ್ವ, ಲಿಂಗರಾಜ ಚರಿತ್ರೆ, ವಿಜಯವಾಣಿ, ಆದಿಜನ ಸುಧಾರಣೆ, ದಾಂಪತ್ಯಧರ್ಮ, 63 ಪುರಾತನರ ಚರಿತ್ರೆ, ಪ್ರಮಥಾಚಾರ ದೀಪಿಕೆ, ಬಸವಣ್ಣ ಅವರ ಶುದ್ಧಿ ಮತ್ತು ಸಂಘಟನೆ ಗ್ರಂಥಗಳ ಒಂದೊಂದು ಸಾವಿರ (ಒಟ್ಟು 9000) ಪ್ರತಿ ಅಚ್ಚಾದವು. ಹೀಗೆ ಆಲಮಟ್ಟಿ ವಿದ್ಯಾಲಯದಿಂದ 7 ವರ್ಷಗಳಲ್ಲಿ 40,000 ಪ್ರತಿಗಳು ಪ್ರಕಟವಾದವು. ಇವುಗಳಲ್ಲಿ 32000 ಗ್ರಂಥಗಳು ಮಾರಾಟವಾದವು. ಜನಜಾಗೃತಿ ಮತ್ತು ಪ್ರಯೋಜನೆಗಳೇ ಮಂಜಪ್ಪ ಅವರ ಗ್ರಂಥ ಪ್ರಸಾರದ ಪರಮೋದ್ದೇಶ, ಕಾರಣ ಗ್ರಂಥಗಳ ಬೆಲೆ ತೀರ ಕಡಿಮೆಯಾಗಿದ್ದಿತು. ಈ 32000 ಗ್ರಂಥಗಳ ವಿಕ್ರಯದಿಂದ ಮಂಜಪ್ಪ ಅವರಿಗೆ 25000 ರೂಪಾಯಿಗಳ ಆದಾಯವಾಯಿತು.

1924ರ ಬೆಳಗಾವಿ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ 'ಸತ್ಯಾಗ್ರಹಿ ಬಸವೇಶ್ವರ' ಗ್ರಂಥದ ಸಾವಿರಾರು ಪ್ರತಿಗಳನ್ನು ಉಚಿತವಾಗಿ ಹಂಚಿದರು. ಬಸವ ತತ್ವಗಳು ಮಹಾತ್ಮಾ ಗಾಂಧಿಯವರಿಗೂ ಪರಪ್ರಾಂತದವರಿಗೂ ತಿಳಿಯಲೆಂಬ ಉದ್ದೇಶದಿಂದ ಈ ಗ್ರಂಥಗಳು ಹಿಂದಿ-ಮರಾಠಿಯಲ್ಲಿ ಅಚ್ಚಿಸಿದ್ದರು. 1933ರಿಂದ ಚಿಕ್ಕ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿ, ಉಚಿತವಾಗಿ ಹಂಚಲು ಪ್ರಾರಂಭಿಸಿದರು. ಈ ಯೋಜನೆಯಡಿಯಲ್ಲಿ ಹೊರಬಂದ 'ಬಸವ ಸಂದೇಶ'ದ 50,000 ಪ್ರತಿಗಳು ಮಾರಾಟವಾದವು. ಈ ಕೃತಿಯ ಸಾವಿರ ಪ್ರತಿಗಳ ಬೆಲೆ ಕೇವಲ 8 ರೂಪಾಯಿ, "ಇದು ಕರ್ನಾಟಕದಲ್ಲಿಯೇ ಒಂದು ಅಭೂತಪೂರ್ವ ಪ್ರಸಂಗ"ವೆಂದು ಮಂಜಪ್ಪನವರೇ ನುಡಿದಿದ್ದಾರೆ. 'ಶ್ರಾವಣಮಾಸ'ದಲ್ಲಿಯೂ ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಿ, ಪ್ರಸಾರಗೊಳಿಸುವ ಯೋಜನೆ ರೂಪಿಸಿದರು. ಇದರ ಅಂಗವಾಗಿ 'ವೀರಶೈವ ಏಕೀಕರಣ' ಗ್ರಂಥದ 1500 ಪ್ರತಿ ಮಾರಾಟ ಮಾಡಿದರು. 1934ನೆಯ ವರ್ಷದ ಬಸವ ಜಯತಿಯಂದು 'ಭಕ್ತಿಯ ಬೆಳಗು' ಕೃತಿಯ 20,000 ಪ್ರತಿಗಳು ಪ್ರಸಾರವಾದವು. ಹೀಗೆ ನಾಲ್ಕು ವರ್ಷಗಳ ಅಲ್ಪಾವಧಿಯಲ್ಲಿ ಚಿಕ್ಕ ಪುಸ್ತಕಗಳ 1 ಲಕ್ಷ ಪ್ರತಿಗಳು ನಾಡಿನ ತುಂಬ ಪ್ರಸಾರವಾದವು.

ಮಂಜಪ್ಪ ಅವರು 1915ರಿಂದ 1925ರವರೆಗೆ ಪ್ರಸಾರ ಮಾಡಿದ ಗ್ರಂಥಗಳ ಪ್ರತಿಸಂಖ್ಯೆ ಹೀಗಿದೆ, ವಾರದ ಮಲ್ಲಪ್ಪನವರ ಚರಿತ್ರೆ (ಆವೃತ್ತಿ–1, ಪ್ರತಿ–1000), ಸ್ವಕರ್ತವ್ಯ ಸಿದ್ಧಾಂತ (ಆವೃತ್ತಿ–2, ಪ್ರತಿ–2000), ಬುದ್ಧಿಯ ಮಾತು (ಆವೃತ್ತಿ–7, ಪ್ರತಿ–15000), ಸ್ತ್ರೀ ನೀತಿಸಂಗ್ರಹ (ಆವೃತ್ತಿ–3, ಪ್ರತಿ–

6000), ಬುದ್ಧ ಚರಿತ್ರೆ (ಆವೃತ್ತಿ–1, ಪ್ರತಿ–1000), ಗಾಂಧಿ ಚರಿತ್ರೆ (ಆವೃತ್ತಿ–2, ಪ್ರತಿ–2000), ಆರೋಗ್ಯ ಜೀವನ (ಆವೃತ್ತಿ–2, ಪ್ರತಿ–3000), ರಾಮತೀರ್ಥರ ಉಪನ್ಯಾಸ (ಆವೃತ್ತಿ–1, ಪ್ರತಿ–7000), ಬಸವ ಚರಿತ್ರೆ (ಆವೃತ್ತಿ–1, ಪ್ರತಿ–3000), ಭಾರತೀಯರ ದೇಶಭಕ್ತಿ (ಆವೃತ್ತಿ–1, ಪ್ರತಿ–1000), ಆಧುನಿಕ ಜರ್ಮನಿ (ಆವೃತ್ತಿ–1, ಪ್ರತಿ–1000), ಕೇರಹಾರ್ಡಿ (ಆವೃತ್ತಿ–1, ಪ್ರತಿ–1000), ಖಾದಿ (ಆವೃತ್ತಿ–1, ಪ್ರತಿ–2000), ಬ್ರಹ್ಮಚರ್ಯ (ಆವೃತ್ತಿ–2, ಪ್ರತಿ–5000), ವೀರಶೈವ ಸಮಾಜ ಸುಧಾರಣೆ (ಆವೃತ್ತಿ–1, ಪ್ರತಿ–1000), ಅಹಿಂಸೆ (ಆವೃತ್ತಿ–1, ಪ್ರತಿ–3000), ಸತ್ಯಾಗ್ರಹ ಧರ್ಮ (ಆವೃತ್ತಿ–1, ಪ್ರತಿ–7000)– ಹೀಗೆ ಒಟ್ಟು 65000 ಪ್ರತಿಗಳು. ಇವುಗಳಲ್ಲಿ ಬುದ್ಧಿಯ ಮಾತು, ಸ್ತ್ರೀನೀತಿ ಸಂಗ್ರಹ, ಶ್ರೀ ರಾಮತೀರ್ಥರ ಉಪನ್ಯಾಸ, ಬ್ರಹ್ಮಚರ್ಯ ಹಾಗೂ ಆರೋಗ್ಯ ಜೀವನ ಹೆಚ್ಚು ಜನಪ್ರಿಯತೆ ಹೊಂದಿದ ಗ್ರಂಥಗಳಾಗಿದ್ದವು. ಹೀಗೆ ಹರ್ಡೇಕರ ಮಂಜಪ್ಪನವರ ಒಟ್ಟು 80 ಚಿಕ್ಕ–ದೊಡ್ಡ ಗ್ರಂಥಗಳ 3 ಲಕ್ಷ ಪ್ರತಿಗಳು ಪ್ರಸಾರವಾದವು. ಮಂಜಪ್ಪನವರ ಈ ಗ್ರಂಥ ಪ್ರಸಾರ ಕಾರ್ಯ ನಾಡಿನ ಜನರು ನಿಬ್ಬೆರಗಾಗುವಂತೆ ಮಾಡಿತು.

ಪ್ರಕಾಶನಕ್ಕಾಗಿ ಸಾಕಷ್ಟು ಧನಸಹಾಯ, ಮಾರಾಟ ವ್ಯವಸ್ಥೆಗೆ ಮಳಿಗೆ–ಸಿಬ್ಬಂದಿ, ಜಾಹಿರಾತು–ಪ್ರಕಟಣೆಗಳಿದ್ದರೂ ಒಂದು ಗ್ರಂಥದ ನೂರು ಪ್ರತಿಗಳೂ ಮಾರಾಟವಾಗುವುದು ಇಂದು ದುಸ್ತರವಾಗಿದೆ. ಪ್ರಕಟವಾದ ಎಲ್ಲ ಗ್ರಂಥಗಳೂ ಬೀಗಮುದ್ರೆ ಬಿಗಿಸಿಕೊಂಡು ಸಂಗ್ರಹ ಕೊಠಡಿಯಲ್ಲಿ ಉಳಿಯುವ ಪರಿಸ್ಥಿತಿ ಇಂದು ಬಂದೊದಗಿದೆ. ಆದರೆ ಅಷ್ಟೊಂದು ಧನಸಹಾಯವಿಲ್ಲದೆ, ಮಾರಾಟ ವ್ಯವಸ್ಥೆ, ಸಿಬ್ಬಂದಿ ಸಹಾಯ, ಜಾಹಿರಾತು–ಪ್ರಕಟಣೆ ಅನುಕೂಲಗಳಿಲ್ಲದಿದ್ದರೂ ಮಂಜಪ್ಪ ಅವರು 3 ಲಕ್ಷ ಪ್ರತಿಗಳ ಪ್ರಸಾರ ಕಾರ್ಯ ಮಾಡಿದುದು ಅಸದೃಶವೆನಿಸಿದೆ. ಮಂಜಪ್ಪ ಅವರು ಮಾಡಿದ ಗ್ರಂಥ ಪ್ರಸಾರವೆಂದರೆ ಸಮಾಜ ವಿಮರ್ಶೆ–ಆಧುನಿಕ ಆಲೋಚನೆಗಳ ಪ್ರಸಾರ ಕಾರ್ಯವೇ ಆಗಿದೆ, ಸಂಸ್ಕೃತಿಯ ಸಂವರ್ಧನೆ – ಪ್ರಸಾರ ಕಾರ್ಯವೇ ಆಗಿದೆ. ರಾಷ್ಟ್ರೀಯ ಪ್ರಜ್ಞೆಯ ಪುನರುಜ್ಜೀವನ ಕಾರ್ಯಕ್ಕಾಗಿ ಅವರು ಎಣ್ಣೆ–ಬತ್ತಿಯಾಗಿ ಉರಿದು, ನಾಡಿಗೆ ಬೆಳಕಾದರು. ಹೀಗೆ ಮಂಜಪ್ಪ ಅವರು ಆದರ್ಶ ರಾಷ್ಟ್ರೀಯ ಪ್ರಜ್ಞೆಯ ಲೇಖಕರಾಗಿ, ಮುದ್ರಕರಾಗಿ, ಪ್ರಕಾಶಕರಾಗಿ ನಾಡು ನುಡಿಯ ಸೇವೆ ಮಾಡಿದರು.

**ಕೊನೆ ಟಿಪ್ಪಣಿಗಳು**

1. ಹರ್ಡೇಕರ ಮಂಜಪ್ಪ. (1998). *ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ.* ಪು. 26
2. ಅದೇ. ಪು. 35
3. ಹರ್ಡೇಕರ ಮಂಜಪ್ಪ. (1926). *ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.* ಪು. 2
4. ಹರ್ಡೇಕರ ಮಂಜಪ್ಪ. (1998) ಪೂರ್ವೋಕ್ತ. ಪು. 80

**ಪರಾಮರ್ಶನ/ಆಧಾರ ಗ್ರಂಥಗಳು**


- ಹರ್ಡೇಕರ ಮಂಜಪ್ಪ. (1998). *ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ.* ಪ್ರಗತಿ ಗ್ರಂಥ ಪ್ರಚಾರ ಸಮಿತಿ.
- ಹರ್ಡೇಕರ ಮಂಜಪ್ಪ. (1926). *ಸ್ವಾಮಿ ರಾಮತೀರ್ಥರ ಉಪನ್ಯಾಸಗಳು.* ರಾಷ್ಟ್ರಜೀವನ ಗ್ರಂಥಮಾಲೆ.